


# ಪುಸ್ತಕ ಮತ್ತು ಗನ್!

ಅಮೆರಿಕದ ರಾಬರ್ಟ್ ದಿ ಮೂಲತಃ ಕಲಾವಿದನಲ್ಲ; ಡಿಸೈನರ್. ಆತನಿಗೆ ಪುಸ್ತಕಗಳನ್ನು ವಿವಿಧ ಡಿಸೈನ್‌ನಲ್ಲಿ ಕತ್ತರಿಸುವ ಹುಚ್ಚು. ಅದರಲ್ಲೂ ಇತ್ತೀಚೆಗೆ ಆತನ ಗನ್ ಪುಸ್ತಕಗಳು ಸಾಕಷ್ಟು ಜನಪ್ರಿಯವಾಗಿವೆ. ಇಲ್ಲಿರುವ ಚಿತ್ರಗಳನ್ನು ಗಮನಿಸಿದರೆ, ರಾಬರ್ಟ್ ದಿ ಎಂಥೆಂತಹ ಹಳೆಯ, ಹೊಸ ಪುಸ್ತಕಗಳನ್ನು ಪರಿಪೂರ್ಣ ಗನ್‌ಗಳಂತೆಯೇ ಮಾಡಿದ್ದಾನೆ, ನೋಡಿ!

ಮ್ಯಾಡಿಸನ್‌ನ ವಿಸ್ಕನ್‌ಸಿನ್ ವಿಶ್ವವಿದ್ಯಾನಿಲಯದ ಅಂಡರ್ ಗ್ರಾಜುವೇಟ್ ಆಗಿದ್ದ ರಾಬರ್ಟ್ ದಿ, ಚಿಕಾಗೋದಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಲೆಟರಿಂಗ್ ಆ್ಯಂಡ್ ಡಿಸೈನ್‌ನಲ್ಲಿ (ಈ ಸಂಸ್ಥೆ ಈಗ ಬಂದ್ ಆಗಿದೆ) ಕೆಲಸ ಕಲಿತವನು. ಕ್ಯಾಲಿಗ್ರಫಿ ಸೈನ್ ಪೇಂಟಿಂಗ್ ಈತನಿಗೆ ಅಚ್ಚುಮೆಚ್ಚಾಗಿದ್ದವು. ಅದು ಹೇಗೋ ಹಳೆಯ ಪುಸ್ತಕವೊಂದನ್ನು ಇಂಗ್ಲಿಷ್‌ನ ದಿಸ್ ಎಂಬ ಅಕ್ಷರಗಳ ರೂಪಕ್ಕೆ ಕತ್ತರಿಸಿದ ಬಳಿಕ, ಆತನಿಗೆ ಗನ್‌ಗಳ ಡಿಸೈನ್‌ನ ಹುಚ್ಚು ಹಿಡಿಯಿತು. ಚಿಕಾಗೋದ ಸಂಸ್ಥೆಯಲ್ಲಿ ಕಲಿತ ಎನಾಮೆಲ್ ಪೇಂಟಿಂಗ್ ಕೂಡಾ ನೆರವಿಗೆ ಬಂತು. ಈಗ ಈತನೊಬ್ಬ ಖ್ಯಾತ ವಿನ್ಯಾಸಕ. ಈತ ಬಂದೂಕು ಪುಸ್ತಕಗಳು ಕಲಾರಸಿಕರ ಸಂಗ್ರಹದಲ್ಲಿ ಸೇರತೊಡಗಿವೆ. ಆದರೆ ಅಮೆರಿಕದ ಕಲಾವಿದರು ಈತನನ್ನು ‘ಕಲಾವಿದ’ ಎಂದು ಪರಿಗಣಿಸಲು ಸಿದ್ಧರಿಲ್ಲವಂತೆ! ‘ಈತನೇನಿದ್ದರೂ ಡಿಸೈನರ್ ಅಷ್ಟೆ’ ಎನ್ನುವುದು ಅವರ ವಾದ!

■ ವಸಂತ ಮಾಲವಿ




